ಮಾತನಾಡಿದರೆ, ಮೌನ ವಹಿಸಿದರೆ, ಆಕಳಿಸಿದರೆ, ಕೆಮ್ಮಿದರೆ, ಸೀನಿದರೆ, ಪರ ಪರ ಮೈ ಕೆರೆದುಕೊಂಡರೆ ಭಕ್ತಾದಿಗಳಿಗೆ ಪವಾಡದಂತೆ ಕಾಣತೊಡಗಿತು. ಪ್ರವಾದಿಗಳು ಅತ್ತಿತ್ತ ಹೊರಳಿದರೆ ಸಾಕು ತಮ್ಮಂತಹ ಪಾಪಿಗಳ ಕಣ್ಣಿಗೆ ಕಾಣದ ದೇವರು ಪ್ರವಾದಿಗಳಿಗೆ ಕಾಣುವುದರಿಂದಲೇ ಅವರು ಕಣ್ಣನ್ನು ಹೊರಳಿಸುತ್ತಾರೆ ಎಂದು ಭಕ್ತರು ಪಿಸುಗುಡತೊಡಗಿದರು. ಒಮ್ಮೆಯಂತೂ ಪ್ರವಾದಿಯವರು ಕಣ್ಣು ಗುಡ್ಡೆ ಬಲಗಡೆಗೆ ತಿರುಗಿಸಿದ ಕ್ಷಣಕ್ಕೆ ಸರಿಯಾಗಿ ಅಲ್ಲಿದ್ದ ಮರವೊಂದರ ಒಣಗಿದ್ದ ಸಣ್ಣ ಕೊಂಬೆಯೊಂದು ಚಟ್ ಚಟ್ ಎಂದು ಮುರಿದು ಬಿತ್ತು. ದೇವರು ಚಲಿಸಿದ್ದಕ್ಕೆ ಕೊಂಬೆ ಮುರಿದು ಬಿದ್ದಿದೆ ಎಂದು ಭಕ್ತಾದಿಗಳು ತೀರ್ಮಾನಿಸಿಬಿಟ್ಟರು. ಆ ಜಾಗದಲ್ಲಿ ಒಂದು ವಜ್ರಖಚಿತ ಚಿನ್ನದ ಸಿಂಹಾಸನ ಪ್ರತಿಷ್ಠಾಪನೆಯಾಗಿಯೇ ಬಿಟ್ಟಿತು.

ಈ ಕೇಂದ್ರದ ವಿಶೇಷವೇನೆಂದರೆ ಅಲ್ಲಿ ಯಾವ ದೇವರನ್ನೂ ಪ್ರತಿಷ್ಠಾಪಿಸಲಿಲ್ಲ. ಅದು ಯಾವ ದೇವರ ಪ್ರಾರ್ಥನಾ ಸ್ಥಳವಾಗದೆ ಬರೀ 'ಪ್ರವಾದಿ ಕೇಂದ್ರ' ಎಂದೇ ಜನಪ್ರಿಯವಾಯಿತು. ಅಲ್ಲಿ ಮೊದಮೊದಲು ಯಾರದೇ ಪ್ರಾರ್ಥನೆ ನಡೆಯುತ್ತಿರಲಿಲ್ಲ. ಆದರೆ ಭಕ್ತರು ಕೇಂದ್ರದಲ್ಲಿ ಮುಂಜಾನೆ ಮತ್ತು ಸಂಜೆ ಪ್ರವಾದಿಯ ಭಜನೆ ಮಾಡತೊಡಗಿದರು. ಸಾಹಿತಿವರೇಣ್ಯರಿಂದ ಭಜನೆ, ಕೀರ್ತನೆ, ವಚನಗಳನ್ನು ಬರೆಸಿದರು. ಸಂಗೀತ ನಿರ್ದೇಶಕರಿಂದ ಸಿ.ಡಿ.ಗಳನ್ನು ಮಾಡಿಸಿದರು. ಅನೇಕ ಭಜನಾ ತಂಡಗಳನ್ನು ಸಿದ್ಧಗೊಳಿಸಿದರು. ಎಲ್ಲ ಭಜನೆ, ವಚನ, ಕೀರ್ತನೆಗಳಲ್ಲಿ ಪ್ರವಾದಿಯ ಹೊಗಳಿಕೆ ಬಿಟ್ಟರೆ ದೇವರು ದಿಂಡರುಗಳ ಪ್ರಸ್ತಾಪವೇ ಇರಲಿಲ್ಲ. ಬರುಬರುತ್ತಾ ಭಜನಾ ಕಾರ್ಯಕ್ರಮಗಳು ದಿನವಿಡೀ ನಡೆಯತೊಡಗಿದವು.

ಪ್ರವಾದಿ ಕೇಂದ್ರದಿಂದ ಹೊರಬಿದ್ದ ಸುದ್ದಿಯೇನೆಂದರೆ 'ಅವರಿಗೆ ಒಬ್ಬ ಮನುಷ್ಯನನ್ನು ನೋಡಿದ ಕೂಡಲೆ ಅವನ ವಯಸ್ಸು ಮತ್ತು ಆಯಸ್ಸು ಗೊತ್ತಾಗುತ್ತದೆ. ಜನರು ಕೊನೆಯುಸಿರೆಳೆಯುವ ದಿನಾಂಕ ಮತ್ತು ಸಮಯವನ್ನು ಪ್ರವಾದಿ ಕರಾರುವಾಕ್ಕಾಗಿ ಹೇಳಬಲ್ಲರು. ಆದರೆ ಅನಾವಶ್ಯಕವಾಗಿ ಹೇಳುವುದಿಲ್ಲ. ಇಷ್ಟೇ ಅಲ್ಲ ಒಂದು ಹೆಜ್ಜೆ ಮುಂದೆ ಹೋಗಿ ಒಬ್ಬ ಮನುಷ್ಯನ ಆಯಸ್ಸನ್ನು ಕತ್ತರಿಸಿ ಮತ್ತೊಬ್ಬನಿಗೆ ವರ್ಗಾಯಿಸಬಲ್ಲರು. ಆಯಸ್ಸು ವರ್ಗಾವಣೆಯಿಂದ ಮನುಷ್ಯನೊಬ್ಬನ ಆಯಸ್ಸನ್ನು ಹೆಚ್ಚಿಸಬಲ್ಲರು'. ಹೀಗೆ ಮನುಷ್ಯನ ಆಯಸ್ಸನ್ನು ಕಡಿತಗೊಳಿಸಬಲ್ಲ ಮತ್ತು ಹೆಚ್ಚಿಸಬಲ್ಲ ಭೂಲೋಕದ ಇತಿಹಾಸದ ಏಕಮೇವಾದ್ವಿತೀಯರಾದ ಇವರು ಪ್ರವಾದಿಯಲ್ಲದೆ ಮತ್ತೇನು... ಎಂಬ ಮಾತುಗಳು ನಗರಿಗರ ಕಿವಿಯಲ್ಲಿ ಅನುರಣಿಸಿದವು. ಮನುಕುಲ ಎಂದೂ ಕಂಡು ಕೇಳರಿಯದ ವಿದ್ಯೆಯನ್ನು ಕರಗತ ಮಾಡಿಕೊಂಡಿದ್ದ ಸಾಕ್ಷಾತ್ ಪ್ರವಾದಿಯಿಂದಲೇ ಈ ಸುದ್ದಿ ಬಿತ್ತರಿಸಲ್ಪಟ್ಟಿತ್ತು.

ಅಮೂರ್ತವಾದ ಒಬ್ಬನ ಆಯಸ್ಸನ್ನು ತುಂಡರಿಸುವುದು! ತುಂಡರಿಸಿದ ಆಯಸ್ಸಿನ ಭಾಗವನ್ನು ಮತ್ತೊಬ್ಬನ ಆಯಸ್ಸಿಗೆ ಸೇರಿಸಿ ದೀರ್ಘಾಯುಷಿಯನ್ನಾಗಿ ಮಾಡುವುದು...! ಜನರಿಗೆ ನಂಬಿಕೆಯೇ ಬರಲೊಲ್ಲದು. ಆದರೆ ಅಮೂರ್ತ ದೇವರನ್ನು ಕಾಣಬಲ್ಲ ಅತಿಮಾನುಷ ಶಕ್ತಿಯಿರುವ ಪ್ರವಾದಿಯೇ ಬಾಯ್ಬಿಟ್ಟು ಹೇಳುತ್ತಿರುವಾಗ ನಂಬದೇ ಇರುವುದು ಹೇಗೆ? ಅಸ್ಥಿರ ಮನಸ್ಸಿನ ನಗರಿಗರಿಗೆ ಪ್ರವಾದಿಯೇ ದೈವಕ್ಕಿಂತ ಹೆಚ್ಚಿನದಾಗಿ ತೋರತೊಡಗಿದರು. ಅವರಿವರಿಂದ ಕೇಳಿದ ಸುದ್ದಿಯಿರಲಿ ಪ್ರತಿಯೊಬ್ಬನಿಗೂ ಒಂದು ಒಳದನಿಯ ಮೊಳಗು ಕೇಳಿದಂತಾಯಿತು.

ನಗರದಲ್ಲಿ ಬುದ್ಧಿವಂತರ ಗುಂಪೊಂದಿತ್ತು. 'ಅರೆ! ಇರುವ ಅರವತ್ನಾಲ್ಕು ವಿದ್ಯೆಗಳನ್ನು ಬಲ್ಲ ನಾವು ವೇದ, ಆಗಮ, ಇತಿಹಾಸ, ನ್ಯಾಯ, ಕಾವ್ಯ, ಇಂದ್ರಜಾಲ, ಮಹೇಂದ್ರಜಾಲ ಮುಂತಾದ ವಿದ್ಯೆಗಳ ಹೆಸರು ಕೇಳಿದ್ದೇವೆ ಮತ್ತು ತಿಳಿದುಕೊಂಡಿದ್ದೇವೆ. ವಿಜ್ಞಾನದ ನೂರಾರು ಶಾಖೆಗಳು, ಮಾನವಿಕಗಳು, ಕಂಪ್ಯೂಟರ್, ಎ.ಐ.ಗಳಲ್ಲದೆ ವಿಶ್ವದ ಸರ್ವಧರ್ಮಗಳನ್ನೂ ಕರಗತ ಮಾಡಿಕೊಂಡಿದ್ದ ಪ್ರೊಫೆಸರ್‌ಗಳು, ವಿಜ್ಞಾನಿಗಳು ಆಯಸ್ಸನ್ನು ಕಟ್ ಅಂಡ್ ಪೇಸ್ಟ್ ಮಾಡುವ ಇದ್ಯಾವುದೋ ಹೊಸ ವಿದ್ಯೆಯ ಹೆಸರನ್ನು ಸಹ ಕೇಳಿಲ್ಲವಲ್ಲ ಎಂದು ತಲೆ ಚಚ್ಚಿಕೊಂಡರು ಮತ್ತು ಕಾದು ನೋಡುವ ತಂತ್ರಕ್ಕೆ ಶರಣಾದರು.

ಅಲ್ಲೊಬ್ಬ ಶ್ರೀಮಂತನಿದ್ದ. ರಾಜ್ಯಗಳ ಮುಖ್ಯಮಂತ್ರಿಗಳು ಮತ್ತು ದೇಶದ ಪ್ರಧಾನಿಗಳೇ ಅವನ ಸ್ನೇಹಕ್ಕೆ ಹಾತೊರೆಯುತ್ತಿದ್ದರು. ಅವನಿಗೆ ಸಾವಿರಾರು ಕೋಟಿ ಸಾಲ ಮಂಜೂರು ಮಾಡಿ ನಂತರ